
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –26 ದಿನಾಂಕ : 08–01–2025


## ದಿನಾಂಕ: 08.01.2025 ರ ವಾರದ ಸಭೆಯ ವರದಿ

**ದಿನಾಂಕ: 08.01.2025 ರಂದು ಪ್ರಧಾನ ಮಂತ್ರಿಯವರ ಸೂರ್ಯಘರ್ ಯೋಜನೆಯಾದ ಸೋಲಾರ್ ವಿದ್ಯುಚ್ಛಕ್ತಿ ಯೋಜನೆಯನ್ನು ಶಿವಮೊಗ್ಗ ಮತ್ತು ಇತರೇ ಪ್ರದೇಶಗಳಲ್ಲಿ ಕಾರ್ಯಗತಗೊಳಿಸುತ್ತಿರುವ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದಂತಹ ರೊ. ಹೆಚ್.ಎಸ್. ಮೋಹನ್‌ರವರು ಮೇಲ್ಕಂಡ ಯೋಜನೆಯ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಿಸಿ ಮಾತನಾಡಿದರು. ವೇದಿಕೆಯಲ್ಲಿ ರೊ.ಹೆಚ್.ಎಸ್. ಮೋಹನ್, ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರು ಅಂದಿನ ಸಭಾಕಾರ್ಯದರ್ಶಿ ರೋಟರಿಯ ಈ ಸಾಲಿನ ಸಹಕಾರ್ಯದರ್ಶಿ ರೊ. ಸಿ.ವಿಜಯಕುಮಾರ್‌ರವರು ಉಪಸ್ಥಿತರಿದ್ದು ಮೇಲ್ಕಂಡ ಯೋಜನೆಯ ಬಗ್ಗೆ ಪೂರ್ಣ ಮಾಹಿತಿಯು ಮುಖ್ಯ ಅತಿಥಿಗಳಿಂದ ನೀಡಲ್ಪಟ್ಟಿತು.**




ಪ್ರಥಮವಾಗಿ ಶ್ರೀ ಜಿ. ಸತ್ಯನಾರಾಯಣರವರು "ಇಷ್ಟು ದಿನ ಈ ವೈಕುಂಠ ಎಷ್ಟು ದೂರವೊ ಎನ್ನುತ್ತಲಿದ್ದೆ" ಎಂಬ ಕನಕದಾಸರ ಕೀರ್ತನೆಯೊಂದಿಗೆ ಪ್ರಾರ್ಥನೆ ಮಾಡಿದರು. ಕ್ಲಬ್‌ನ ಮಾಜಿ ಕಾರ್ಯದರ್ಶಿ ರೊ.ಸಿ.ಬಿ. ವೀರಣ್ಣನವರು ಸರ್ವರನ್ನು ಸ್ವಾಗತಿಸಿದರು. ಅಂದಿನ ಸಭಾ ಕಾರ್ಯದರ್ಶಿ ರೊ.ಸಿ.ವಿಜಯ ಕುಮಾರ್ ಪ್ರಕಟಣೆಗಳನ್ನು ನೀಡಿದರು. ಮಾಜಿ ಅಧ್ಯಕ್ಷರಾದ ರೊ.ಎನ್.ವಿ. ಭಟ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾದ ರೊ. ಹೆಚ್.ಎಸ್. ಮೋಹನ್‌ರವರು ಸೋಲಾರ್ ರೂಫ್‌ಟಾಪ್ ವಿಚಾರವಾಗಿ ಮಾತನಾಡಿ, ಕಳೆದ ಜನವರಿಯಿಂದ ಈ ಯೋಜನೆ ಜಾರಿಗೊಂಡಿದ್ದು, ವಿದ್ಯುತ್ ಬಿಲ್‌ನಲ್ಲಿ ಉಳಿತಾಯವಾಗುತ್ತಿದ್ದು, ದೇಶದ ಹೆಚ್ಚುವರಿ ವಿದ್ಯುತ್ ಬೇಡಿಕೆಯನ್ನು ತಣಿಸಬಲ್ಲದ್ದಾಗಿದೆ ಈ ಯೋಜನೆ ಎಂದರು. ಅಂತರರಾಷ್ಟ್ರೀಯ ಸವಾಲು ಆಗಿರುವ 2030 ಕ್ಕೆ 500 ಕಿಲೋ ವ್ಯಾಟ್ ವಿದ್ಯುತ್ ಉತ್ಪಾದನೆ




ಹೆಚ್ಚುವರಿಯಾಗಿ ಮಾಡಬೇಕು. ಹಾಲಿ 100 ಕಿಲೋವ್ಯಾಟ್‌ನ ಉತ್ತೇಜನಕ್ಕಾಗಿ ಕಾರ್ಯಗಳಾಗುತ್ತಿವೆ. ಈ ಯೋಜನೆಗೆ ಚೈನಾ ಶೇ 70 ರಷ್ಟು ಉಪಕರಣಗಳನ್ನು ಪೂರೈಸುತ್ತಿದೆಯಾದರೂ ಅದರ ಅವಲಂಬನೆ ತಗ್ಗಿಸಲು ನಮ್ಮಲ್ಲಿಯೇ ಉಪಕರಣಗಳು ಉತ್ಪಾದನೆಗಳಾಗುತ್ತಿವೆ. ದಕ್ಷಿಣ ಆಫ್ರಿಕಾ, ಮದ್ಯಪ್ರಾಚ್ಯದೇಶಗಳು ಅಮೇರಿಕಾದಂತಹ ದೇಶಗಳಿಗೆ ಉಪಕರಣಗಳು ರಫ್ತಾಗುತ್ತಿವೆ. ಉತ್ಪತ್ತಿಯಾದ ವಿದ್ಯುತ್ ಹೇಗೆ ಬದಲಾವಣೆಯಾಗಿ ಗ್ರಿಡ್‌ಗೆ, ಮನೆ ಬಳಕೆಗೆ ಬದಲಾವಣೆಯಾಗಿ ಒದಗುತ್ತದೆ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರವಾಗಿತಿಳಿಸಿದರು. ಇದರಲ್ಲಿ Off Grid, On Grid Hybrid ವಿಧಾನಗಳ ಬಗ್ಗೆ ತಿಳುವಳಿಕೆ ನೀಡಿದರು. ಆ ಬಗೆಗಿನ ವಿವರಗಳು ಈ ರೀತಿ ಇವೆ:

ಕಳೆದ ಎರಡು ದಶಕಗಳಲ್ಲಿ ಸೌರಶಕ್ತಿಯ ಪ್ರಮುಖ ಏರಿಕೆಯನ್ನು ನಾವು ನೋಡಿದ್ದೇವೆ. ಇದಲ್ಲದೇ ಕಳೆದ ಹತ್ತು ವರ್ಷಗಳಲ್ಲಿ ಪ್ರತಿಯುನಿಟ್‌ಗೆ ವಿದ್ಯುತ್ ವೆಚ್ಚವು ದ್ವಿಗುಣಗೊಂಡಿರುವುದನ್ನು ನೋಡಿದ್ದೇವೆ. ಆದರೆ ಪ್ರತೀ ವ್ಯಾಟ್‌ಗೆ ಸೌರ ಫಲಕಗಳ ಬೆಲೆ ಐದುಪಟ್ಟು ಕಡಿಮೆಯಾಗಿದೆ. ಪ್ರವೃತ್ತಿಗಳ ಪ್ರಕಾರ ಮುಂದಿನ ಹತ್ತು ವರ್ಷಗಳಲ್ಲಿ ಸೌರಶಕ್ತಿಯು ವಿದ್ಯುತ್‌ಗಿಂತ ಅಗ್ಗವಾಗಲಿದೆ ಎಂದು ನಾವು ಊಹಿಸಬಹುದು. ಆದ್ದರಿಂದ ಸೌರಶಕ್ತಿಯು ಅಗತ್ಯವಾಗುತ್ತಿದೆ ಮತ್ತು

**2ನೇ ಪುಟಕ್ಕೆ**

## ಈ ವಾರದ ಸಭೆ

**ದಿನಾಂಕ : 15–01–2025 ಬುಧವಾರ** **ಸಂಜೆ 6:45**

**Chief Guest: PDG. Rtn. Dr. P. Narayan**


**Topic: African Safari Experience**

**ಆಫ್ರಿಕನ್ ಸಫಾರಿ ವೀಕ್ಷಣೆಯ ಅನುಭವಗಳ ವಿವರಣೆ**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ




ಅದು ಭವಿಷ್ಯವಾಗಿದೆ ಎಂದು ನೀವು ನೋಡಬಹುದು. ಇತ್ತೀಚಿನ ದಿನಗಳಲ್ಲಿ ಜನರು ತಮ್ಮ ಸಂಶೋಧನೆಯ ಮೂಲಕ ತಮ್ಮ ಹಣ ಮತ್ತು ಪರಿಸರ ಎರಡನ್ನೂ ಉಳಿಸಲು ಉತ್ಪನ್ನವನ್ನು ಖರೀದಿಸುವಾಗ ಪ್ರಜ್ಞಾ ಪೂರ್ವಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಾರೆ. ನಿಮ್ಮ ಸರಳ ಇನ್ವರ್ಟರನ್ನು ಸೌರ ಇನ್ವರ್ಟರ್ ಆಗಿ ಪರಿವರ್ತಿಸಬಹುದು ಎಂದು ನಿಮಗೆ ತಿಳಿದಿದೆಯೇ! ಹೌದು ಇದು ಸೌರ ನಿರ್ವಹಣಾ ಘಟಕದಿಂದ ಸಾಧ್ಯ.

ಗ್ರಿಡ್ ಬಳಕೆಯನ್ನು ಕಡಿಮೆ ಮಾಡಲು ಸೌರಶಕ್ತಿಯ ಆದ್ಯತೆಯಾಗಿ ಬಳಕೆ ಮಾಡುವುದನ್ನು ಖಚಿತಪಡಿಸಲಾಗುತ್ತಿದೆ. ದ್ಯುತಿ ವಿದ್ಯುದ್‌ಜನಕ ವ್ಯವಸ್ಥೆಗಳಿಂದ ಸ್ವಯಂ ಚಾಲಿತವಾಗಿ ಬ್ಯಾಟರಿಯನ್ನು ಚಾರ್ಜ್ ಮಾಡಬಹುದು. ದೀರ್ಘ ಬ್ಯಾಟರಿ ಬಳಕೆ ಮತ್ತು ಸುಧಾರಿತ ಸಿಸ್ಟಂ ಕಾರ್ಯಕ್ಷಮತೆಗಾಗಿ ಚಾರ್ಜಿಂಗ್ ಪ್ರಕ್ರಿಯೆಯನ್ನು ಆಪ್ಟಿಮೈಸ್ ಮಾಡಲಾಗಿದೆ. ಸಮಗ್ರ ಸ್ವಯಂರೋಗ ನಿರ್ಣಯ ಮತ್ತು ವ್ಯಾಪಕವಾದ ಎಲೆಕ್ಟ್ರಾನಿಕ್ ರಕ್ಷಣೆಯು ತಪ್ಪಾದ ವೈರಿಂಗ್‌ಮತ್ತು ಸಿಸ್ಟಂ ದೋಷಗಳ ವಿರುದ್ಧ ಹಾನಿಯನ್ನು ತಡೆಗಟ್ಟುತ್ತದೆ. ರಾತ್ರೆ ಹೊರತುಪಡಿಸಿ ಸ್ವಿಚ್ ಮೂಲಕ ಸ್ವಯಂಚಾಲಿತವಾಗಿ ಅಥವಾ ಹಸ್ತ ಚಾಲಿತವಾಗಿ ವ್ಯವಸ್ಥೆಯು ದೇಶೀಯ ಇನ್ವರ್ಟರ್ ಮತ್ತು ಸೌರ ಇನ್‌ವರ್ಟರ್ ಆಗಿ ಕಾರ್ಯ ನಿರ್ವಹಿಸುತ್ತದೆ. ಈಗ ನೀವು ಸೋಲಾರ್‌ಇನ್ವರ್ಟರ್ ಪಡೆಯಲು ಬಯಸುತ್ತಿದರೆ, ನಿಮ್ಮ ಮನೆಯಲ್ಲಿ ಸ್ಥಾಪಿತವಾದ ಹಳೆಯ ಇನ್ವರ್ಟರ್ ನಿಷ್ಪ್ರಯೋಜಕವೆಂದು ಯೋಚಿಸುತ್ತಿದ್ದರೆ, ಚಿಂತಿಸಬೇಡಿ ಸೌರ ನಿರ್ವಹಣಾ ಘಟಕವು ನಿಮ್ಮ ಸರಿಯಾದ ಆಯ್ಕೆಯಾಗಿದೆ. ನಿಮ್ಮ ಅಸ್ತಿತ್ವದಲ್ಲಿರುವ ಇನ್ವರ್ಟರನ್ನು ಸೌರಫಲಕ ಇನ್ವರ್ಟರ್ ಆಗಿ ಪರಿವರ್ತಿಸಬಹುದಾಗಿದೆ. ಗೋಡೆ ಮೇಲೆ ನೇತುಹಾಕಬಹುದಾದ ಕಾಂಪ್ಯಾಕ್ಟ್ ವಿನ್ಯಾಸದ ಫಲಕಗಳಿವೆ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಈ ಬಗ್ಗೆ ಹೆಚ್ಚಿನ ಮಾಹಿತಿಯುಳ್ಳ ಆಂಗ್ಲ ಭಾಷೆಯ ಬರಹದ ವಿವರಗಳು ಈ ಸಂಚಿಕೆಯಲ್ಲಿ ಬೇರೆಡೆ ಇದೆ. ಅಲ್ಲದೇ ಸೋಲಾರ್ ರೂಫ್‌ಟಾಪ್ ಯೋಜನೆ ಬಗ್ಗೆ ಹೆಚ್ಚಿನ ವಿವರಗಳು ರೊ. ಹೆಚ್.ಎಸ್. ಮೋಹನ್, ಅಭಿಷೇಕ್ ಎಂಟರ್ ಪ್ರೈಸಸ್ ಮೊಬೈಲ್ ನಂ. 94483 96400 94483 96406 94483 96401 ಇಲ್ಲಿಂದ ಪಡೆಯಬಹುದು.

ಕೊನೆಯಲ್ಲಿ ಸೌರ ವಿದ್ಯುತ್ ಬಳಕೆಯಿಂದ ಈ ಕೆಳಕಂಡಂತೆ ಪ್ರಕೃತಿ ಮತ್ತು ಸರ್ಕಾರಕ್ಕೆ ನಮ್ಮಿಂದಾಗಬಹುದಾದ ಸಹಾಯಗಳ ಬಗ್ಗೆ ತಿಳಿಸಿದರು.




- Go Green Environmental Concern
- Biggest Savings in Electric bill for 25 years
- Participating in National Scheme
- Availing Central Government Finance Units.
- Better Control Over monthly cost
- Self reliant to be proud feel
- Reaching 1 crore Houses
- 78000 Crores Subsidy ready.

Subsidy amount 1 KW 30000.00 2 KW 60000.00 3 KW 78000.00

ರೊ. ಡಿ.ಎಸ್. ನಟರಾಜ್ ರೊ.ಎನ್.ವಿ.ಭಟ್ ಮುಂತಾದವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲಾಯಿತು. ಅಧ್ಯಕ್ಷರಾದ ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ ಸೌರವಿದ್ಯುತ್ ಉತ್ಪಾದನೆ ಬಗ್ಗೆ ವಿವರಗಳನ್ನು ನೀಡಿದ ರೊ.ಹೆಚ್.ಎಸ್. ಮೋಹನ್‌ರವರಿಗೆ ಕೃತಜ್ಞತೆ ವ್ಯಕ್ತ ಪಡಿಸಿದರು. ರೊ. ಎನ್.ವಿ.ಭಟ್, ರೊ.ಎಸ್. ಮಂಜುನಾಥ್, ರೊ. ಚಂದ್ರಶೇಖರ್, ರೊ. ವಿಜಯಕುಮಾರ್ ಅಧ್ಯಕ್ಷರು ಸೇರಿ ಮುಖ್ಯ ಅತಿಥಿಗಳಾದ ರೊ ಹೆಚ್.ಎಸ್. ಮೋಹನ್ ರವರನ್ನು ಸನ್ಮಾನಿಸಿದರು. ಕೊನೆಯಲ್ಲಿ ರೊ. ಸಿ. ವಿಜಯಕುಮಾರ್‌ರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು.

## ಗಮನಸಿ – ಭದ್ರಾವತಿ ರೋಟರಿ ಕ್ಲಬ್‌ನೊಂದಿಗೆ ಜಂಟಿ ಸಭೆ

**ನಮ್ಮ ಶಿವಮೊಗ್ಗ ರೋಟರಿ ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ ಭದ್ರಾವತಿ ರೋಟರಿ ಕ್ಲಬ್‌ನಲ್ಲಿ ದಿನಾಂಕ: 21–01–2025, ಮಂಗಳವಾರದಂದು ಚಾರ್ಟರ್ ಡೇ ಆಚರಿಸಿಕೊಳ್ಳುತ್ತಿದ್ದಾರೆ. ಅದೇ ದಿನ ಜಂಟಿ ಸಭೆ ನಡೆಸಲು ನಮ್ಮ ಕ್ಲಬ್ ಸದಸ್ಯರನ್ನು ಆಹ್ವಾನಿಸಿದ್ದಾರೆ. ಆ ದಿನ ಹೊರನಾಡಿನ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಕರ್ತರಾದ ಡಾ. ಭೀಮೇಶ್ವರ ಜೋಷಿಯವರು ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ನಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸೋಣ. ಈ ಸಭೆಗೆ ಬರುವವರು ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಗಳಿಗೆ ದಿನಾಂಕ: 16–01–2025 ರೊಳಗೆ ಫೋನ್ ಮಾಡಿ ತಿಳಿಸಿ. ದಿನಾಂಕ: 22–01–2025 ಬುಧವಾರದ ಸಭೆ ನಮ್ಮ ಕ್ಲಬ್‌ನಲ್ಲಿ ಇರುವುದಿಲ್ಲ.**



**ರೊ. ವಿಶ್ವಾಸ್‌ರವರಿಗೆ ರೋಟರಿ ಕ್ಲಬ್ ವತಿಯಿಂದ ಜನ್ಮ ದಿನದ ಶುಭಾಶಯಗಳನ್ನು ಕೋರಲಾಯಿತು.**

## ಸೋಲಾರ್ ಬಗ್ಗೆ ಹೆಚ್ಚಿನ ಮಾಹಿತಿಗಳು ಆಂಗ್ಲ ಭಾಷೆಯಲ್ಲಿ ನಿಮಗಾಗಿ:

***Why Solar Rooftop System is Good Investment***

*Significant adoption of Rooftop solar can be witnessed across India, especially in states such as Maharastra, Tamil Nadu, Karnataka, Rajasthan and Uttar Pradesh. Improved Net Metering Policies, high grid tariffs and increased awareness among the consumer are the major reasons for an increase in roof top solar adoption. However, is solar a sound and viable Investment? How does it compare to other preferred investment options such as gold, mutual funds, etc., ? Read further to know more:*

***Rooftop solar:*** *The best option for investment in India : With reliable grid access and reduction in solar panels installation cost, several business and home owners are shifting to solar power. Below are few reasons as to why one should invest in rooftop solar.*

***Cost benefit:*** *According to the "Indian residential Energy Survey", there has been an increase in sales of star labelled electrical appliances that are energy efficient. This shows that people have already started to look for options that can help them reduce their electricity bill. A solar rooftop installation can reduce 80-90% of the electricity bill every month. A 5KW solar system can generate around 600 units and save Rs. 4200 per month.*

***Security against future grid tariff increase:*** *Solar system are highly reliable and have a life span of 25 years . This means that you are protected against any increase in the grid tariff of the future. As solar system are very reliable, you save money to terms of maintenance as well.*

***Socially responsible investment :****Solar is green and environmentally sustainable choice. A 5 KW solar system is equivalent to reducing 7.3 tons of carbon dioxide emissions every year. Investing in solar creates a positive impact on everyone. Climate change, Pollution, Natural resourceconstraints and positive public sentiment are creating more demand for electricity procedure from renewable sources.*

***Great ROI attractive pay backs :****Solar is one of the few investments available in the market today that is relatively risk free and offers high returns on investments. Compare to other investments such as Gold (ROI of 16%) stocks (ROI of 10%) and investment Fixed Deposits (ROI of 5.8% to 6.7%) solar promises and ROI of 25-30% investing in Rooftop solar is one the safest investment as it promises attractive paybacks, with a pay back period of 3-5 years .*

***Solar Tax benefits :***

*In addition to all the benefits mentioned above, Incase you own a business then you will be eligible tax credits to accelerated depreciation upto 40% . This improves the return on investment of solar substantially.*

***Conclusion:***

*Solar is the best investment right now that offers low risk and high returns compared to any other investment .*

*Going solar is the best investment after the pandemic which is helping to cut down costs.*

*ORB Energy is the well known Solar Panel manufacturer and Solar Rooftop Integration company from Karnataka. Please contact us to Install your solar rooftop system today.*

***Call us for more details and installation.***
***Rtn. H.S.Mohan,***
***Abhisolar, Abhishek Enterprises.***
***94483 96400/ 94483 96406***

## ದಿನಾಂಕ: 5–01–2025 ರಂದು ರೋಟರಿ ಕ್ಲಬ್ ಶಿವಮೊಗ್ಗ ಹಾಗೂ ಹಿರಿಯ ನಾಗರಿಕರ ಸಂಘದ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಡಾ. ದೀಪ ಎಂ.ಜೆ. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.











ಕಣ್ಣುಗಳು ಮನುಷ್ಯನ ದೇಹದ ಪ್ರಮುಖ ಅಂಗ. ಕಣ್ಣುಗಳನ್ನು ಸಕಾಲದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವುದು ಅಗತ್ಯ. ನಮ್ಮ ಒತ್ತಡದ ಜೀವನದಲ್ಲಿ ಕಣ್ಣುಗಳನ್ನು ನಾವು ಸಕಾಲದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವುದಿಲ್ಲ. ಅದರಲ್ಲೂ ಮಧುಮೇಹ ಇರುವವರು ಕನಿಷ್ಠ ಆರು ತಿಂಗಳಿಗೊಮ್ಮೆ ಆದರೂ ಕಣ್ಣುಗಳನ್ನು ಪರೀಕ್ಷಿಸಿಕೊಳ್ಳುವುದು ಉತ್ತಮ ಎಂದು ಆದರ್ಶ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಪ್ರಖ್ಯಾತ ಕಣ್ಣಿನ ವೈದ್ಯ ಡಾ. ದೀಪ ಎಂ. ಜೆ ತಿಳಿಸಿದರು.

ಶಿವಮೊಗ್ಗ ರೋಟರಿ ಕ್ಲಬ್ ಹಿರಿಯ ನಾಗರೀಕರ ಕ್ಷೇಮಾಭಿವೃದ್ಧಿ ಸಂಘದಿಂದ ರೋಟರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಆರೋಗ್ಯದ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ಜೀವನ ಶೈಲಿ ಆರೋಗ್ಯ ಕ್ರಮ ಹಾಗೂ ಅನುವಂಶೀಯತೆಯಿಂದ ಕಣ್ಣಿನ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಆದ್ದರಿಂದ ನಾವುಗಳು ಕಣ್ಣುಗಳನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿಶ್ರಾಂತ ನೌಕರರ ಸಂಘದ ಅಧ್ಯಕ್ಷ ರವಿಕುಮಾರ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ರೋಟರಿ ಕ್ಲಬ್ ಶಿವಮೊಗ್ಗದ ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ ಅಧ್ಯಕ್ಷತೆ ವಹಿಸಿದ್ದರು. ನೂರಕ್ಕೂ ಹೆಚ್ಚು ಜನ ಸದಸ್ಯರಿಗೂ ಹಾಗೂ ಸಾರ್ವಜನಿಕರಿಗೆ ಡಾ. ದೀಪರವರು ಕಣ್ಣಿನ ತಪಾಸಣೆ ನಡೆಸಿ ಮಾಹಿತಿ ನೀಡಿದರು. ಕಾರ್ಯದರ್ಶಿ ರೊ. ಎನ್.ಜೆ. ಉಷಾ, ಪದಾಧಿಕಾರಿಗಳಾದ ರೊ. ಎನ್.ವಿ. ಭಟ್ ಹಾಗೂ ನೌಕರರ ಸಂಘದ ಅಧ್ಯಕ್ಷ ಶ್ರೀ ಚಂದ್ರಪ್ಪ, ಕಾರ್ಯದರ್ಶಿ ಶ್ರೀಕಾಂತ್, ರೋಟರಿ ಪ್ರಮುಖರಾದ ರೊ. ಕಿಶೋರ್ ಶಿರ್ನಾಳಿ, ರೊ. ವಿ.ಜಿ. ಹೆಗಡೆ, ರೊ. ಗಾಯತ್ರಿ ಸುಮತೀಂದ್ರ, ರೋಟರಿ ಸದಸ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ❖



## ಸಂಪಾದಕೀಯ

### ನಮ್ಮನ್ನು ನಾವು ತಿದ್ದಿಕೊಳ್ಳೋಣ...

ಒಂದೂರಲ್ಲಿ ಒಬ್ಬ ಶ್ರೀಮಂತನಿದ್ದ. ಅವನಿಗೋ ಯಾವಾಗಲೂ ಕಣ್ಣು ನೋವು. ಎಷ್ಟು ಮಂದಿ ವೈದ್ಯರಿಗೆ ತೋರಿಸಿದರೂ ಕಣ್ಣು ನೋವು ಕಡಿಮೆಯಾಗಲಿಲ್ಲ. ಕೊನೆಯ ಪ್ರಯತ್ನವೆಂಬಂತೆ ಸನ್ಯಾಸಿಯ ಹತ್ತಿರ ಆತ ಹೋಗುತ್ತಾನೆ. ಆಗ ಸನ್ಯಾಸಿ 'ನೀನು ಹಸಿರು ಬಣ್ಣದ ಮೇಲೆ ಗಮನ ಕೊಡು, ಬರೀ ಹಸಿರನ್ನೇ ನೋಡುತ್ತಿರು, ಬೇರೆ ಯಾವ ಬಣ್ಣವನ್ನು ನೋಡಬೇಡ, ನಿನ್ನ ಕಣ್ಣು ನೋವು ಕಡಿಮೆಯಾಗುತ್ತದೆ' ಎನ್ನುತ್ತಾನೆ.

ಶ್ರೀಮಂತನಿಗೆ ಇದು ಯಾವ ರೀತಿಯ ಚಿಕಿತ್ಸೆ ಎಂದು ಅಚ್ಚರಿಯಾದರೂ ಸನ್ಯಾಸಿಯ ಮಾತನ್ನು ಅಕ್ಷರಶಃ ಪಾಲಿಸುವವನಂತೆ ತನ್ನ ಸುತ್ತಲಿನ ವಾತಾವರಣವನ್ನು ಹಸಿರಾಗಿ ಪರಿವರ್ತಿಸತೊಡಗುತ್ತಾನೆ. ಇಡೀ ಮಹಲಿಗೂ ಎಲ್ಲ ವಸ್ತುಗಳಿಗೂ ಹಸಿರು ಬಣ್ಣ ಬಳಿಯುತ್ತಾನೆ. ಕೆಲವು ದಿನ ಕಳೆದ ಮೇಲೆ ಆ ಸನ್ಯಾಸಿ ಈತನನ್ನು ನೋಡಲು ಬರುತ್ತಾನೆ. ಆತ ಬರುತ್ತಿದ್ದಂತೆ ಆ ಶ್ರೀಮಂತನ ಆಳು ಹಸಿರು ಬಣ್ಣವನ್ನು ಸನ್ಯಾಸಿಯ ಮೇಲೆ ಸುರಿಯುತ್ತಾನೆ. ಸನ್ಯಾಸಿ ಏಕೆ ಎಂದು ಕೇಳಿದಾಗ, "ನೀವು ಕಾವಿ ಬಟ್ಟೆ ತೊಟ್ಟಿದ್ದೀರಿ. ಹಸಿರು ಬಿಟ್ಟು ಬೇರೆ ಯಾವ ಬಣ್ಣವನ್ನೂ ನೋಡಬಾರದೆಂದು ನಮ್ಮ ಯಜಮಾನರಿಗೆ ಬಲ್ಲವರು ಹೇಳಿದ್ದಾರೆ" ಎನ್ನುತ್ತಾನೆ. ಆಗ ಸನ್ಯಾಸಿಯು ನಗುತ್ತಾ, "ಇಷ್ಟೆಲ್ಲ ಮಾಡುವ ಬದಲು ಒಂದು ಹಸಿರು ಕನ್ನಡಕವನ್ನು ಖರೀದಿಸಿದರೆ ಆಗಿಹೋಗುತ್ತಿತ್ತಲ್ಲ. ಹಣ ಖರ್ಚು ಮಾಡುವ ಅಗತ್ಯವೇ ಇರಲಿಲ್ಲ" ಎನ್ನುತ್ತಾನೆ.

'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿರಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿರಿ' ಎಂದು ಬಸವಣ್ಣನವರು ಹೇಳಿದ್ದು ಇದಕ್ಕೇ. ನಮ್ಮನ್ನು ನಾವು ಬದಲಾಯಿಸಿಕೊಳ್ಳುವುದು ಸುತ್ತಲಿನ ಜಗತ್ತನ್ನು ಬದಲಾಯಿಸುವುದಕ್ಕಿಂತ ಅತ್ಯಂತ ಸುಲಭದ ಕೆಲಸ. ಆದರೆ ಪರಿಪೂರ್ಣ ವ್ಯಕ್ತಿಗಳೆಂದು ಭ್ರಮಿಸಿ ಬೇರೆಯವರನ್ನು ತಿದ್ದಲು ಹೋಗುತ್ತೇವೆ. ಜಗತ್ತನ್ನೇ ಬದಲಾಯಿಸುವ ಯೋಚನೆ ಕೈಬಿಟ್ಟು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ಜಗತ್ತು ಅದಕ್ಕನುಗುಣವಾಗಿ ಕಾಣುತ್ತದೆ. ಬೇರೆಯವರಿಗೆ ಉಪದೇಶವನ್ನು ಹೇಡಿಯೂ ಮಾಡಬಲ್ಲ. ಆದರೆ ತಮ್ಮ ತಪ್ಪುಗಳಿಗೆ ನೆಪ ಹೇಳದೇ ಅದನ್ನು ಒಪ್ಪಿಕೊಳ್ಳುವುದಕ್ಕೆ ಧೈರ್ಯಬೇಕು. ಹಾಗಾಗಿ ಆತ್ಮವಿಮರ್ಶೆ ಎನ್ನುವುದು ಸದಾ ನಮಗೆ ದಾರಿ ತೋರುವ ಕಿರು ದೀವಿಗೆಯಾಗಬೇಕು. ಏಕೆಂದರೆ ತಪ್ಪು ಮಾಡುವ ಮತ್ತು ತಿದ್ದಿಕೊಳ್ಳುವ ನಿರಂತರ ಪ್ರಕ್ರಿಯೆಯೇ ಬದುಕು.

• ರೊ. ಎಂ. ಮಾಧವಾಚಾರ್



ರೊ. ಎ. ಮಂಜುನಾಥ್‌ರವರು ಕಂಟ್ರಿ ಕ್ಲಬ್‌ನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರಿಗೆ ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ಅಭಿನಂದನೆಗಳು

## Happy Birthday Wishes



*Rama Gopal*
*11th Jan*







*Nirmala Mahadev*
*15th Jan*

**'ನವೋತ್ಸವ' – ರೋಟರಿ ಜಿಲ್ಲಾ ಸಮ್ಮೇಳನ ಕಾರ್ಯಕ್ರಮವು ಸಾಕಷ್ಟು ಮನರಂಜನೆ, ಉತ್ತಮ ಭಾಷಣಕಾರರು, ಸಾಂಸ್ಕೃತಿಕ ಚಟುವಟಿಕೆಗಳು, ಮೌಲ್ಯಯುತವಾದ ಉಪಯುಕ್ತ ಕಿಟ್, ಅತ್ಯುತ್ತಮ ರುಚಿಕರವಾದ ಆಹಾರಗಳು, ಫೆಲೋಶಿಪ್ ಡಿನ್ನರ್, ತುಂಬಾ ಒಳ್ಳೆಯ ವ್ಯವಸ್ಥೆಗಳು, ಹೀಗೆ ಕಾರ್ಯಕ್ರಮದ ವಾತಾವರಣವು ಎಲ್ಲರಿಗೂ * ಮ್ಯಾಜಿಕ್ ಕ್ಷಣಗಳನ್ನು ಸೃಷ್ಟಿಸುತ್ತದೆ * ರೋಟರಿ ಮಿತ್ರರು ದಯವಿಟ್ಟು ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಲು ಯೋಜಿಸಿ.**




### ಚಿಂತನ

**ಸೇವೆ ಮಾಡುವಾಗ ಸಮಯ ನೋಡಬೇಡಿ**
**ಪ್ರಸಾದ ಸ್ವೀಕರಿಸುವಾಗ ಸ್ವಾದ ನೋಡಬೇಡಿ**
**ಸತ್ಸಂಗ ಮಾಡುವಾಗ ಜಾಗ ನೋಡಬೇಡಿ**
**ದಾನ ಮಾಡುವಾಗ ಖರ್ಚು ನೋಡಬೇಡಿ**
**ದಯೆ ತೋರುವಾಗ ಅವಶ್ಯಕತೆ ನೋಡಬೇಡಿ**

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495